ಅಧ್ಯಕ್ಷರು:- ನಾವು ಆ ವಿಷಯವನ್ನು ಕ್ಲೋಸ್ ಮಾಡುತ್ತಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಎಲ್ಲದಕ್ಕೂ ನೀವು ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಸ್ಕೂಲಿಗೂ- ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಒಂದೊಂದಕ್ಕೆ ಕ್ಯಾಪಿಟೇಷನ್ ಶುಲ್ಕ 20 ಲಕ್ಷ, 30 ಲಕ್ಷ ವಸೂಲಿ ಮಾಡುತ್ತಾರೆ.

ಅಧ್ಯಕ್ಷರು:- ನಾವು ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ ಎಲ್ಲಾ ಸ್ಕೂಲ್‌ಗಳನ್ನು ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ. ಪೂರ್ಣ ಪ್ರಜ್ಞ ಸ್ಕೂಲಿನಲ್ಲಿ ನನಗೂ ಕೂಡ ಅನುಭವ ಇದೆ. ಯಾವ ಕಾರಣಕ್ಕೂ ಕೂಡ ಯಾವುದರಲ್ಲೂ ಡೊನೇಷನ್ ತೆಗೆದುಕೊಂಡಿಲು. ನಮ್ಮ ಮಕ್ಕಳೂ ಹೋಗುತ್ತಿದ್ದಾರೆ. ಇವತ್ತಿನವರೆಗೂ ಕೇಳಿದ್ದು ನಾನು ನೋಡಿಲ್ಲ. ಬಹಳ ಒಳ್ಳೆಯ ಸ್ಕೂಲು ಎಂದು ಹೆಸರು ಪಡೆದುಕೊಂಡು ಬಂದಿದೆ; ಪೂರ್ಣಪ್ರಜ್ಞ ಆದ್ದರಿಂದ ದಯವಿಟ್ಟು ಎಲ್ಲಕ್ಕೂ ಜನರಲೈಸ್ ಮಾಡುವುದರಲ್ಲಿ ಅರ್ಥ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನೇ ಒಂದು ಸಾರಿ ಒಬ್ಬರಿಗೆ ಹೇಳುವುದಕ್ಕೆ ಹೋದಾಗ ಅವರು ಏನು ಹೇಳಿದರು ನಿಮಗೆ ಗೊತ್ತಿಲ್ಲ. ರಾಜ್ಯಪಾಲರಿಂದ ಪತ್ರ ಬಂತು. ಆ ಪತ್ರವನ್ನು ಬುಟ್ಟಿಗೆ ಹಾಕಿದ್ದೇವೆಂದು. ನಾನು ನೇಕವಾಗಿ ಅವರಿಗೆ ಹೇಳಿದೆ. ರಾಜ್ಯಪಾಲರ ಪತ್ರವನ್ನು ಬುಟ್ಟಿಗೆ ಹಾಕುವ ಮಟ್ಟದಲ್ಲಿದ್ದೀರಾ ಎಂದು ಕೇಳಿದೆ. ಅಂದರೆ ಇಷ್ಟು ಉದ್ದಟತನದಿಂದ ಮಾತನಾಡುತ್ತಾರೆ. ಇಂತಹ ಶಾಲೆಗಳ ಲಿಸ್ಟ್ ಕೊಡುತ್ತೇನೆ ನಿಮಗೆ. ಈ ರಾಜ್ಯದಲ್ಲಿ ಇದೊಂದು ದೊಡ್ಡ ಕಳ್ಳತನದ ವ್ಯವಹಾರ ನಡೆಯುತ್ತಿದೆ.

ಶ್ರೀ ಜಿ.ಎ ಶ್ರೀರಾಮರೆಡ್ಡಿ: ಒಬ್ಬರ ಅನುಭವ ಆಗಿರಬಹುದು. ಅವರಿಗೂ ಆತ್ಮೀಯತೆ ಇರಬಹುದು.

ಅಧ್ಯಕ್ಷರು:- ಶ್ರೀಮತಿ ಪ್ರಮೀಳಾ ಅವರಿಗೆ ಹೇಳುತ್ತೇನೆ. ನಾನು ಹೇಳಿರತಕ್ಕ ಮಾತನ್ನು ಮತ್ತೊಮ್ಮೆ ಪುನರುಚ್ಚಾರ ಮಾಡುತ್ತೇನೆ. ಸಾಕ್ಷ್ಯಾಧಾರಗಳು ನನ್ನಲ್ಲಿ ಇಲ್ಲದೇ ಆರುವುದರಿಂದ ಆ ಮಾತನ್ನು ನಾನು ಹೇಳಿದ್ದರಿಂದ ನಾನು ವಿಷದವನ್ನು ವ್ಯಕ್ತಪಡಿಸುತ್ತೇನೆ. ಅರ್ಥ ಆಯಿತಾ? ಉಳಿದಿದ್ದರಿಂದ ಯಾರಾದರೂ ಕೊಟ್ಟವರಿದ್ದರೆ, ತೆಗೆದುಕೊಂಡವರಿದ್ದರೆ let them suffer from that guilt conscious. But I don't want to suffer from that guilt conscious. I have made the position very clear. We will go to the next subject.

- - -

(4) ಗಮನ ಸೆಳೆಯುವ ಸೂಚನೆ

ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡುವ ಸಹಾಯಧನವನ್ನು ನಿಲ್ಲಿಸಿರುವುದರ ಬಗ್ಗೆ

ಶ್ರೀ ಯು ಆರ್ ಸಭಾಪತಿ(ಉಡುಪಿ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯಾವಂತಹ ನಿರುದ್ಯೋಗಿಗಳು ರಾಷ್ಟ್ರೀಕೃತ ಬ್ಯಾಂಕ್ ಮುಂತಾದ ಆರ್ಥಿಕ ಸಂಸ್ಥೆ ನೆರವಿನಿಂದ ನಡೆಸುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡುವ ಸಹಾಯ ಧನವನ್ನು ನಿಲ್ಲಿಸಿರುವುದರಿಂದ ಉದ್ಭವವಾಗಿರುವ ಪರಿಸ್ಥಿತಿ ಬಗ್ಗೆ ಮಾನ್ಯ ಸಣ್ಣ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ.ಬಿ.ಎ. ಮೊಹಿದ್ದಿನ್ (ಸಣ್ಣ ಕೈಗಾರಿಕೆಗಳ ಸಚಿವರು):- ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಯನ್ನು ವಿದ್ಯಾವಂತ ನಿರುದ್ಯೋಗಿನ ರಾಷ್ಟ್ರೀಕೃತ ಬ್ಯಾಂಕು ಮತ್ತು. ಕೆ.ಎಸ್.ಎಫ್.ಸಿ. ಮೊದಲಾದ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿದವರಿಗೆ ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯವಿಲ್ಲದ ಕೈಗಾರಿಕೆಗಳಿಗೂ ಮತ್ತು ಉಳಿದ 173 ತಾಲ್ಲೂಕುಗಳಲ್ಲೂ ಸ್ಥಾಪಿಸುವ ಕೈಗಾರಿಕೆಗಳಿಗಾಗಿ ಅವರು ಹೂಡುವ ಸ್ಥಿರ ಬಂಡವಾಳದ (ಭೂಮಿ, ಕಟ್ಟಡ ಮತ್ತು ಯಂತ್ರೋಪಕರಣ ಇದರ ಮೌಲ್ಯ) ಮೇಲೆ ಶೇಕಡ 25 ರಷ್ಟನ್ನು ರೂ.25 ಲಕ್ಷಕ್ಕೆ ಮಿತಿಗೊಳಿಸಿ ಸಹಾಯಧನವಾಗಿ ದಿನಾಂಕ:12-7-1993ರಿಂದಲೂ ನೀಡಲು ಯೋಜನೆ ತಂದಿದ್ದು, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಮಹಿಳೆಯರು, ಅಲ್ಪಸಂಖ್ಯಾತರು ಹಾಗೂ ಅಂಗವಿಕಲರು ಅಂತಹ ಕೈಗಾರಿಕೆಗಳನ್ನು ಸ್ಥಾಪಿಸಿದಲ್ಲಿ ಅವರಿಗೆ ಶೇಕಡ 5ರ ಹೆಚ್ಚಿನ ಸಹಾಯದವನವನ್ನು ಒಂದು ಲಕ್ಷಕ್ಕೆ ಮಿತಿಗೊಳಿಸಿ ನೀಡಲಾಗುತ್ತಿದ್ದು, ಅದರಂತೆ ಪ್ರತಿ ವರ್ಷ ಸಹಾಯಧನ ಮಂಜೂರು ಮಾಡುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಈ ರೀತಿ ಸಹಾಯಧನ ಮಂಜೂರಾತಿ ನೀಡಿ ಬಿಡುಗಡೆ ಮಾಡುತ್ತಿದ್ದು, 1991ರ ನೀತಿಯ ಅನ್ವಯ ಮೊದಲು ಸಹಾಯಧನವನ್ನು ಶೇಕಡ 15 ರಷ್ಟು ನೀಡುತ್ತಿದ್ದು, 1993ರ ನಂತರ ಸಹಾಯಧನವನ್ನು ಶೇಕಡ 25 ರಿಂದ 30ಕ್ಕೆ ಏರಿಸಿತು. ಹೀಗೆ ಸಹಾಯಧನ ಮೌಲ್ಯವನ್ನು ಏರಿಸಿದ್ದರಿಂದ ಪ್ರತಿ ವರ್ಷವೂ ಮಂಜೂರಾದ ಎಲ್ಲಾ ಕೈಗಾರಿಕೆಗಳಿಗೆ ಬಿಡುಗಡೆ ಮಾಡಿರುವುದಿಲ್ಲ. ದಿನಾಂಕ:31-1-1998ರ ಅಂತ್ಯಕ್ಕೆ ಒಟ್ಟು 9,025 ಘಟಕಗಳಿಗೆ ರೂ.199.54 ಕೋಟಿ ಸಹಾಯಧನ ಬಿಡುಗಡೆ ಬಾಕಿ ಇರುತ್ತದೆ.

ಮೇಲಿನಂತೆ ಇನ್ನೂ ಸೆಪ್ಟೆಂಬರ್ 1994ರಿಂದ 31-1-1998ರವರೆಗೆ ರೂ.199.54 ಕೋಟಿ ಹಣವನ್ನು 9025 ಘಟಕಗಳಿಗೆ ಬಿಡುಗಡೆ ನೀಡಬೇಕಾಗಿದೆ.

ಈ ಹಣವನ್ನು ಬಿಡುಗಡೆ ಮಾಡಲು ಹಣದ ಕೊರತೆ ಇರುವುದರಿಂದ ಯಾವ ಕೈಗಾರಿಕೆಗಳಿಗೆ ಮಾರಾಟತೆರಿಗೆ ಇರುವುದೋ ಆ ಕೈಗಾರಿಕೆಗಳಿಗೆ ಸಹಾಯಧನದ ಬದಲು ಮಾರಾಟ ತೆರಿಗೆಯನ್ನು ಹೊಂದಾಣಿಕೆ ಮಾಡುವಂತೆ ಮತ್ತು ಮಾರಾಟ ತೆರಿಗೆ ಇಲ್ಲದಿರುವ ಘಟಕಗಳಿಗೆ ನಗದು ರೂಪದಲ್ಲಿ ಹಣ ನೀಡುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ದಿನಾಂಕ:10-12-1997ರಿಂದ ಸಣ್ಣ ಕೈಗಾರಿಕಾ ಘಟಕ ಬಂಡವಾಳ ಹೂಡಿಕೆ ರೂ.60 ಲಕ್ಷದಿಂದ ರೂ.3 ಕೋಟಿಗೆ ಭಾರತ ಸರ್ಕಾರ ಏರಿಸಲಾಗಿರುವುದರಿಂದ ಯಾವ ಮೌಲ್ಯದವರೆಗಿನ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಸಹಾಯಧನ ನೀಡಬೇಕೆನ್ನುವುದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

+ ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರವಾದಂತಹ ಒಂದು ಸೂಚನೆಯನ್ನು ಅವರು ಇಟ್ಟಿದ್ದಾರೆ. 1994 ರಿಂದ 31.1.1998ರವರೆಗೆ ಸುಮಾರು

190.5 ಕೋಟಿ ರೂ ಸಬ್ಸಿಡಿ ರಾಕಿ ಇದೆ ಎಂದು ಹೇಳುತ್ತಿದ್ದಾರೆ. ಆದರೆ ನಾನು ಸ್ವಾರಸ್ಯಕರವಾದಂತಹ ವಿಚಾರವನ್ನು ಕೆಎಸ್ಎಫ್ಸಿ ಬಗ್ಗೆ ಹೇಳುತ್ತೇನೆ. 1994-95ರಲ್ಲಿ 880 ಘಟಕಗಳಿಗೆ ಸುಮಾರು 16.10 ಕೋಟಿ ರೂ. ಸಹಾಯ ಧನ ಬಿಡುಗಡೆಯಾಗಿದೆ. ಇದರಲ್ಲಿ 10.30 ಕೋಟಿ ರೂಗಳನ್ನು ಕೋಟ್ಟಿದ್ದಾರೆ, 5 ಕೋಟಿ ರೂ ಬಾಕಿ ಇದೆ. 1995-96ರಲ್ಲಿ 1,278 ಘಟಕಗಳಿಗೆ ಸುಮಾರು 35.40 ಕೋಟಿ ರೂ.ಸಹಾಯಧನ ಬಿಡುಗಡೆಯಾಗಿದೆ. ಅದರಲ್ಲಿ 15.83 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಇನ್ನೂ 19.57 ಕೋಟಿ ರೂ ಬಾಕಿ ಇದೆ. ಪುನ: 1996-97ರಲ್ಲಿ 1,600 ಘಟಕಗಳಿಗೆ 47.80 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ, ಅದರಲ್ಲಿ 2.89ಕೋಟಿ ರೂ. ಬಿಡುಗಡೆ ಮಾಡಿದ್ದಾರೆ, ಇನ್ನೂ 45 ಕೋಟಿ ರೂ ಬಾಕಿ ಉಳಿದಿದೆ. ಇದರ ಮೇಲೆ 1997-98ನೇ ಸಾಲಿಗೆ ಡಿಐಸಿ ಅವರು ಸ್ಯಾಂಕ್ಷನ್ ಮಾಡಬೇಕು ಎಂದು ಹೇಳಿ, ಕೆಎಸ್ಎಫ್ಸಿ ಅವರಿಂದ ಡಿಐಸಿ ಅವರಿಗೆ ವರ್ಗಾವಣೆ ಮಾಡಿದ್ದಾರೆ. ಕೆಎಸ್ವಫ್ಸಿ ಅವರು ಏನು ಮಾಡಿದ್ದಾರೆ ಎಂದರೆ, ಸಹಾಯಧನ ಸಿಗುತ್ತದೆ ಎಂದು ತಿಳಿದುಕೊಂಡು ಬ್ರಿಡ್ಜ್ ಲೋನ್ ಕೊಟ್ಟಿದ್ದಾರೆ. ಹತ್ತು ಪರ್ಸೆಂಟ್ ಇಂಟರೆಸ್ಟ್‌ನಲ್ಲಿ ಅವರಿಗೆ ಕೊಟ್ಟಿರುವಾಗ ಆ ಹಣವನ್ನು ಅವರು ಯಾವ ರೀತಿ ಹಿಂತಿರುಗಿಸಬೇಕು ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಇವರು ಸೀನಿಯಾರಿಟಿ ಪ್ರಕಾರ ಸಹಾಯಧನ ಬಿಡುಗಡೆ ಮಾಡಬೇಕು. ಆದರೆ ಇವರು ಸೀನಿಯಾರಿಟಿ ಪ್ರಕಾರ ಮಾಡಲಿಲ್ಲ, ಇವರಿಗೆ ಇಷ್ಟ ಬಂದಂತೆ ಮಾಡಿದ್ದಾರೆ. ಅದಕ್ಕೆ ಎರಡು ಉದಾಹರಣೆಯನ್ನು ಕೊಡುತ್ತೇನೆ. ಕೋಲಾರದಲ್ಲಿರುವ ಸಪ್ತಗಿರಿ ಕೋಲ್ಡ್ ಸ್ಟೋರೇಜ್ ಅವರಿಗೆ 5.16 ಲಕ್ಷ ರೂಪಾಯಿಗಳನ್ನು 1998ರಲ್ಲಿ ಬಿಡುಗಡೆ ಮಾಡಿದ್ದಾರೆ. ಸೀನಿಯಾರಿಟಿ ಪ್ರಕಾರ ಇದು ಅಕ್ಟೋಬರ್ 1995ರವರೆಗೆ ಮಾತ್ರ ಶೇ 50ರಷ್ಟು ಕೊಡಬೇಕು ಎಂಬ ವಿಚಾರವನ್ನು ನಮ್ಮ ಪುರಾವೆಗಳು ತಿಳಿಸುತ್ತದೆ. ಆದರೆ ಇವರು ಸೀನಿಯಾರಿಟಿ ಬಿಟ್ಟು 1996ರಲ್ಲಿ ಮಂಜೂರಾತಿ ಆದವರಿಗೆ 1998ರಲ್ಲಿ ಸಪ್ತಗಿರಿ ಕೋಲ್ಡ್ ಸ್ಟೋರೇಜ್ ಅವರಿಗೆ 5.16 ಲಕ್ಷ ರೂ ಹಣ ಬಿಡುಗಡೆ ಮಾಡಿದ್ದಾರೆ. ಅದೇ ರೀತಿ ವೆಂಕಟೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ ಅವರಿಗೆ 5.62 ಲಕ್ಷ ರೂಪಾಯಿಗಳನ್ನು ಸೀನಿಯಾರಿಟಿ ಬಿಟ್ಟು ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಏನು ವ್ಯವಹಾರ ನಡೆದಿದೆ? ಮಾನ್ಯ ಶ್ರೀ ಮೋಹಿದ್ದಿನ್ ಅವರು ಅಧಿಕಾರ ವಹಿಸಿಕೊಂಡ ಮೇಲೆ ಹಣವನ್ನು ಬಿಡುಗಡೆ ಮಾಡಿದ್ದೀರೋ ಅಥವಾ ನಿಮ್ಮ ಹಿಂದಿನ ಮಂತ್ರಿಗಳು ಬಿಡುಗಡೆ ಮಾಡಿದ್ದಾರೆಯೇ ಅಥವಾ ಇದರಲ್ಲಿ ಏನಾದರೂ ಲೇವಾದೇವಿ ಮಾಡಿಕೊಂಡು ಸಹಾಯಧನವನ್ನು ಸೀನಿಯಾರಿಟಿ ಬಿಟ್ಟು ಕೊಟ್ಟಿರುವಿರಾ? ಇದೂ ಅಲ್ಲಿದೆ 1995-, 96-97ರಲ್ಲಿ ಡಿ ಐ ಸಿ ನಲ್ಲಿ ಎಷ್ಟು ಘಟಕಗಳಿಗೆ ನೀವು ಕೊಟ್ಟಿರುವಿರಿ? ಒಂದು ವಿದ್ಯುತ್ ಇಲ್ಲದೆ ಅವರು ನರಾಳಾಡುತ್ತಿದ್ದಾರೆ, ಇನ್ನೊಂದು ಕಡೆ ಬ್ಯಾಂಕುಗಳಿಂದ ಆರ್ಥಿಕ ಸಹಾಯ ಪಡೆದುಕೊಂಡಿರುವವರಿಗೆ ರಾಷ್ಟ್ರೀಕೃತ ಬ್ಯಾಂಕಿನವರು ಜಪ್ತಿಗೆ ವಾರೆಂಟ್ ತಂದಿದ್ದಾರೆ; ನಿಮ್ಮ ಫ್ಯಾಕ್ಟರಿಯನ್ನು ಜಪ್ತಿ ಮಾಡುವ ಉದ್ದೇಶವಾರೂ ಏನು? ನೀವು ಇದನ್ನು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಅಡ್‌ಜೆಸ್ಟ್‌ಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಆದಕಾರಣ ಇದನ್ನು ಪರಿಶೀಲನೆ ಮಾಡಬೇಡಿ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಗಮನವನ್ನು ಸೆಳೆಯುತ್ತಿದ್ದೇನೆ. ನೀವು ನಿರುದ್ಯೋಗಿ ವಿದ್ಯಾವಂತರಿಗೆ ಪ್ರಾಮಾಣಿಕತನ, ಡಿಟ್ಟತನದ ಬಗ್ಗೆ ಬಹಳಷ್ಟು ಮಾಟನಾಡಿದವರು, ಇವತ್ತು ಅನೇಕ ಘಟಕಗಳು ಸಿಕ್‌ಯುನಿಟ್ ಆಗುವಂತಹ ಪರಿಸ್ಥಿತಿಗೆ ಬಂದಿದೆ. ಒಂಭತ್ತು ಸಾವಿರ ಘಟಕಗಳಲ್ಲಿ, ಸುಮಾರು ಆರು ಸಾವಿರ ಘಟಕಗಳು ಆರ್ಥಿಕವಾದ ಸಮಸ್ಯೆಯಿಂದ ಇಲ್ಬ್ಣಗೊಂಡಿರುವ ಕಾರಣ ಸಂಬಂಧ ಪಟ್ಟಂತಹ ಸಂಸ್ಥೆಗಳು ಅದರ ಜಪ್ತಿಗೆ ಹೊರಟಿದ್ದಾರೆ. ಅಂತವರಿಗೆ ತಾವು ಯಾವ ರೀತಿ ಸಹಾಯ ಮಾಡುತ್ತೀರಾ? ಸುಮಾರು 199 ಕೋಟಿ ರೂ ಸಹಾಯಧನವನ್ನು ಬಿಡುಗಡೆ ಮಾಡದೆ ಇಟ್ಟುಕೊಂಡಿರುವಿರಲ್ಲಾ,

ಇದು ಯಾವ ರೀತಿಯಾದಂತಹ ದಿಟ್ಟತನ? ಪ್ರಾಮಾಣಿಕತನ? ಇದ್ದಕ್ಕೆ ಮಾನ್ಯ ಕೈಗಾರಿಕಾ ಸಚಿವರು ಸ್ಪಷ್ಟವಾದ ಉತ್ತರ ಕೊಡಬೇಕು. ಸೀನಿಯಾರಿಟಿ ಪ್ರಕಾರ ಯಾವ ರೀತಿ ಕೊಟ್ಟಿರುವಿರಿ ನೀವು? ಶಾಸಕರು ಫೋನ್ ಮಾಡಿದ ಕೂಡಲೇ ಸೀನಿಯಾರಿಟಿ ಎಂದು ಹೇಳಿದ್ದಾರೆ. ಸೀನಿಯಾರಿಟಿ ಇಲ್ಲದೆ ಇವರಿಗೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ದಯವಿಟ್ಟು ಈ ವಿಷಯವನ್ನು ಸದನಕ್ಕೆ ತಿಳಿಸಿ.

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ನಮಗೂ ಸಹ ಇಷ್ಟೊಂದು ಸಬ್ಸಿಡಿ ಬಾಕಿ ಇರುವುದರ ಬಗ್ಗೆ ಸಂತೋಷ ಇದೆ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬಾರದು. ಆದರೆ ಸರ್ಕಾರಕ್ಕೆ ಅನೇಕ ಆದ್ಯತೆಗಳು ಇವೆ. ಸಂಪನ್ಮೂಲದ ಕೊರತೆಯಿಂದಾಗಿ ಈ ರೀತಿ ಸಬ್ಸಿಡಿ ಬಾಕಿ ಉಳಿಯುವುದಕ್ಕೆ ಕಾರಣವಾಗಿದೆ. ನಮ್ಮಲ್ಲಿ ಬೇರೆ ರೀತಿ ಮೂಲಭೂತವಾದಂತಹ ಸೌಕರ್ಯಗಳು ಇಲ್ಲದೆ ಇದ್ದರೂ, ಕಳೆದ ವರ್ಷ ಸುಮಾರು 21 ಸಾವಿರ ಯೂನಿಟ್‌ಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಂದಿವೆ. 1992-93ರಿಂದ ನೀವು ನೋಡಿದರೆ, there is an increase in the industrial units.-- -- -- -- -- -- ಅದರಿಂದಾಗಿ ನಾವು ಒದಗಿಸಿರತಕ್ಕಂತಹ ಸುಮಾರು 35 ಕೋಟಿ ರೂ. ಆದರೆ 1990-91ರಲ್ಲಿ ಇದಕ್ಕೆ ಒದಗಿಸಿರತಕ್ಕಂತಹ ಹಣ ಸುಮಾರು 12-13 ಕೋಟಿ ರೂ. ಮಾತ್ರ.

ಇವತ್ತು ನಾವು 35 ಕೋಟಿ ರೂ ಒದಗಿಸಿದ್ದರೂ ಕೂಡ, ನಾವು ಎಲ್ಲಾ ಘಟಕಗಳನ್ನು ಬೆಂಗಳೂರು ಬಿಟ್ಟು, ಬೆಂಗಳೂರಿನಲ್ಲೂ ಸಹ ಮಾಲಿನ್ಯ ಮಾಡದೆ ಇರತಕ್ಕಂತಹ ಘಟಕಗಳಿಗೆ ಕಡ ನಾವು ಸಬ್ಸಿಡಿಯನ್ನು ಕೊಡತಕ್ಕಂತಹ ನಿರ್ಧಾರವನ್ನು ಕೈಗೊಂಡಿದ್ದೇವೆ. ನಿರ್ಧಾರವನ್ನು ಕೈಗೊಂಡಂಥ ವಾತಾವರಣದಲ್ಲಿ ನಮಗೆ ಹೆಚ್ಚಿನ ಬಜೆಟರಿ ಸಪೋರ್ಟ್ ಸಿಗದೆ ಇರುವುದರಿಂದ ಮತ್ತು ಇವತ್ತಿನ ದಿವಸ ನೀವು ನೋಡಿದ್ದೀರಿ, ಈ ಬಜೆಟ್‌ನಲ್ಲಿ ಕೂಡ ನಮ್ಮ ಇಲಾಖೆಗೆ ಹೆಚ್ಚು ಖೋತಾವಾಗಿದೆ. ಈ ರೀತಿ ಇದ್ದರೂ ಸಹ, ನಾವು ಇದಕ್ಕೆ ಪ್ರೋತ್ಸಾನ ಕೊಡಬೇಕು ಎನ್ನುವ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಎಕ್ಸಾಮಿನ್ ಮಾಡುತ್ತಿದ್ದಾರೆ. ಈ ಒಂದು ಸೇಲ್ಸ್ ಟ್ಯಾಕ್ಸ್ ಕನ್‌ಸಿಷನ್ ಕೊಡುವುದರಿಂದ ಖಂಡಿಕವಾಗಿ ಸುಮಾರು 100 ಕೋಟಿ ರೂಪಾಯಿಗಳುಷ್ಟು ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ವಿಷಯವನ್ನು ನಾವು ಇಂಡಸಿ ಸೋ ಸಿಯೇಷ್ಸ್ ಜೊತೆಗೆ ಚರ್ಚೆ ಮಾಡಿ ಈ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಯಾರು ಯಾರಿಗೆ ಸೆಲ್ಸ್‌ಟ್ಯಾಕ್ಸ್ ಕೊಡತಕ್ಕಂತಹ ಅರ್ಹತೆ ಬಂದಿಕೆಯೋ ಅಂತಹ ಘಟಕಗಳಿಗೆ ನಾವು ಕೊಡತಕ್ಕಂತಹ ಕೆಲಸ ಮಾಡುತ್ತೇವೆ. ಮತ್ತು ಕೆಎಸ್.ಎಫ್.ಸಿ ನಲ್ಲಿ ಬ್ರಿಡ್ಜ್ ಲೋನ್ ಯಾರು ತೆಗೆದುಕೊಂಡಿದ್ದಾರೆ, ಅಂತವರಿಗೆ ಬೇರೆ ರೀತಿಯಾದಂತಹ ಪರಿಹಾರವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಒಟ್ಟಿನಲ್ಲಿ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ನಮ್ಮ ಸನ್ಮಾನ್ಯ ಉಪ ಮುಖ್ಯ ಮಂತ್ರಿಯವರಿಗೆ ಅಫೀಲ್ ಮಾಡಿದ್ದೇನೆ, ಕೂಡಲೇ ಒಂದು ಮೀಟಿಂಗ್ ಮಾಡಿ ಎಂದು ನಮ್ಮ ಫೈನಾನ್ಸ್ ಮಿನಿಸ್ಟರಿ ಮತ್ತು ಇಂಡಸ್ಟ್ರೀ ಮಿನಿಸ್ಟರ್ ಕುಳಿತುಕೊಂಡು ಇದಕ್ಕೆ ಒಂದು ಸರಿಯಾದಂತಹ ಪರಿಹಾರವನ್ನು ಕೊಡತಕ್ಕಂತಹ ಪ್ರಯತ್ನ ಮಾಡುತ್ತಾರೆ ಎಂಬ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಉಪಾಧ್ಯಕ್ಷರು:- ಅವರು ಸೀನಿಯಾರಿಟಿ ಬಗ್ಗೆ ಕೇಳುತ್ತಿದ್ದಾರೆ, ಅದರ ಬಗ್ಗೆ ಹೇಳಿ.

ಶ್ರೀ ಬಿ.ಎ.ಮೊಹಿದ್ದೀನ್:- ಆ ರೀತಿಯಾದಂತಹದ್ದು ಏನೂ ನಡೆಯಲಿಲ್ಲ. ಆ ರೀತಿಯಾದದು ಏನಾದರೂ ಇದ್ದರೆ ನಾನು ತಿಳಿಸುತ್ತೇನೆ. ಅವರು ಹೇಳುತ್ತಾರೆ ಅವರ ತಾಲ್ಲೂಕಿನಲ್ಲಿ